ಪಿಡಬ್ಲೂ-1

ಸಾಕ್ಷಿಗೆ ದಿನಾಂಕಃ 08.02.2024 ರಂದು ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಬಿ ವಕೀಲರವರಿಂದಃ

ನಾನು ಪಾಂಡವಪುರ ನಿವಾಸಿ ಎಂದರೆ ಸರಿ. ನಾನು ಕಳೆದ 20 ವರ್ಷಗಳಿಂದ ಪಾಂಡವಪುದಲ್ಲಿ ವಾಸವಾಗಿದ್ದೇನೆ. ಮೈಸೂರಿನ ಮೇಟಗಳ್ಳಿಯಲ್ಲಿ ನಮ್ಮ ಬಾಬ್ತು ಮನೆ ಇದೆ. ಸದರಿ ಮನೆಯನ್ನು ಈಗ ರೂ 3,500/- ಗಳಿಗೆ ಬಾಡಿಗೆಗೆ ಕೊಟ್ಟಿರುತ್ತೇನೆ. ನಾನು ಗೃಹಿಣಿಯಾಗಿದ್ದು, ಯಾವುದೇ ಕೆಲಸಕ್ಕೆ ಹೋಗಿರುವುದಿಲ್ಲ. ನನಗೆ ಮನೆಯ ಬಾಡಿಗೆಯನ್ನು ಬಿಟ್ಟು ಬೇರೆ ಆದಾಯ ಇರುವುದಿಲ್ಲ ಎಂದರೆ ಸರಿ. ಪಾಂಡವಪುರದಲ್ಲಿ 4 ಮನೆಗಳನ್ನು ಬಾಡಿಗೆಗೆ ನೀಡಿರುತ್ತೇನೆ. ಸದರಿ ಮನೆಗಳಿಂದ ನನಗೆ ರೂ 25,000/- ಆದಾಯ ಬರುತ್ತದೆ, ಸದರಿ ಮನೆಗಳಿಗೆ ಬಾಡಿಗೆ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ. ಈಗ 2 ವರ್ಷಗಳಿಂದ ಬಾಡಿಗೆಗೆ ಕೊಟ್ಟಿರುತ್ತೇವೆ, ಆ ಪೂರ್ವದಲ್ಲಿ ಮನೆಗಳನ್ನು ಲೀಸ್ ಗೆ ಹಾಕಿರುತ್ತೇವೆ. ಲೀಸ್ ಪತ್ರ ಮತ್ತು ಬಾಡಿಗೆ ಕರಾರು ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

2. ಮೈಸೂರಿನಲ್ಲಿ ಆರೋಪಿಯ ಮನೆ ನಮ್ಮ ಮನೆ ಎದುರು ಇದ್ದು, ನನಗೆ ಅವರ ಪರಿಚಯವಾಯಿತು. ಆರೋಪಿಯು ನಮ್ಮ ಮನೆಯ ಎದುರು ಮನೆಯಲ್ಲಿ ಬಾಡಿಗೆಗೆ ಇದ್ದು, ಮನೆಯ ನಂಬರ ಗೊತ್ತಿಲ್ಲ, ವಿಳಾಸ 15 ನೇ ಅಡ್ಡರಸ್ತೆ, ಬಿ ಎಂ ಶ್ರೀನಗರ ಮೈಸೂರು ಆಗಿರುತ್ತದೆ. ಆರೋಪಿಯು ಬಿಸಿನೆಸ್ ಮಾಡುತ್ತಿರುವುದಾಗಿ ನನಗೆ ಗೊತ್ತು, ಯಾವ ಬಿಸಿನೆಸ್ ಎಂದು ನನಗೆ ಗೊತ್ತಿಲ್ಲ.

ಆರೋಪಿಯು ಮನೆ ಖರ್ಚಿಗಾಗಿ ಸಾಲ ಮಾಡಿಕೊಡಿದ್ದು, ಸದರಿ ಸಾಲ ತೀರಿಸುವ ಸಲುವಾಗಿ ನನ್ನ ಬಳಿ ಹಣವನ್ನು ಕೇಳಿರುತ್ತಾರೆ. 2021 ರ ಆಗಸ್ಟ ತಿಂಗಳಿನ 3 ನೇ ವಾರದಲ್ಲಿ ನನ್ನಿಂದ ಆರೋಪಿ ಸಾಲ ಪಡೆದಿರುತ್ತಾರೆ. ಆರೋಪಿ ತಂದೆ ಹಾಗೂ ಆರೋಪಿ ಪಾಂಡವಪುರದಲ್ಲಿರುವ ನಮ್ಮ ಮನೆಗೆ ಬಂದು ಹಣ ಪಡೆದಿರುತ್ತಾರೆ. ನಾನು ಆರೋಪಿಗೆ ಸಾಲವನ್ನು ಅವರು ಕೇಳಿದ 1 ವಾರದ ನಂತರ ನೀಡಿರುತ್ತೇನೆ. ನನಗೆ ಆರೋಪಿಗೆ ಹಣ ನೀಡಿರುವ ನಿರ್ಧಿಷ್ಟ ದಿನಾಂಕ ನೆನಪಿಲ್ಲ. ನನಗೆ ಆರೋಪಿ ನಾನು ಸಾಲ ನೀಡಿದ ದಿನದಂದು ಚೆಕ್ಕನ್ನು ನೀಡಿರುವುದಿಲ್ಲ, 3 ತಿಂಗಳ ಒಳಗಾಗಿ ಸಾಲ ಮರುಪಾವತಿ ಮಾಡುವುದಾಗಿ ತಿಳಿಸಿರುತ್ತಾರೆ. ನಾನು 6 ಲಕ್ಷ ನಗದನ್ನು ನೀಡಿರುತ್ತೇನೆ. ಆರೋಪಿ ಸದರಿ 6 ಲಕ್ಷವನ್ನು ಬಡ್ಡಿ ಸೇರಿಸಿ ವಾಪಸು ನೀಡುವುದಾಗಿ ತಿಳಿಸಿರುತ್ತಾರೆ.

3. ನನ್ನ ನೋಟಿಸಿನಲ್ಲಿ ಆರೋಪಿ ಬಡ್ಡಿ ಕೊಡುವುದಾಗಿ 6 ಲಕ್ಷ ಪಡೆದಿರುವ ವಿಚಾರವನ್ನು ತಿಳಿಸಿರುವುದಿಲ್ಲ. ವಕೀಲರಾದ ವೆಂಕಟೇಶ ನನ್ನ ಅಳಿಯ ಎಂದರೆ ಸರಿ. ದಿನಾಂಕ 26.11.2021 ರಂದು ನನಗೆ ಆರೋಪಿ ಚೆಕ್ಕನ್ನು ನೀಡಿರುತ್ತಾರೆ. ನಾವು ಹಣ ನೀಡಿದ 3 ತಿಂಗಳ ನಂತರ ನಾನು ಆರೋಪಿಯ ಬಳಿ ಹೋಗಿ ಸಾಲ ಮರುಪಾವತಿ ಮಾಡಿ ಎಂದು ಕೇಳಿರುತ್ತೇನೆ. ನಾನು ಆರೋಪಿಗೆ ಹಣ ನೀಡುತ್ತಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಆರೋಪಿಯ ತಂದೆಯವರ ಸಮಕ್ಷಮ ಹಣ ನೀಡಿರುವುದಾಗಿ ಯಾವುದೇ ಲಿಖಿತ ದಾಖಲೆಯನ್ನು ತಯಾರಿಸಿ ಸಹಿ ಪಡೆಯಲು ತೊಂದರೆ ಇತ್ತಾ ಎಂದರೆ ತೊಂದರೆ ಇರಲಿಲ್ಲ ಎಂದು ನುಡಿದರು. ನಾನು ಆರೋಪಿಗೆ ಹಣ ನೀಡುವಾಗ ನಮ್ಮ ಮನೆಯಲ್ಲಿ ಯಾರು ಇರಲಿಲ್ಲ. ನಾನು ಎಸ್ ಬಿ ಐ, ಡಿ ಸಿ ಸಿ ಬ್ಯಾಂಕ್ ಪಾಂಡವಪುರ ಶಾಖೆಯಲ್ಲಿ ಖಾತೆಗಳನ್ನು ಹೊಂದಿರುತ್ತೇನೆ. ಜನವರಿ 2021 ರಿಂದ ಇಲ್ಲಿಯವರೆಗಿನ 2 ಬ್ಯಾಂಕುಗಳ ನನ್ನ ಖಾತೆಯ ಸ್ಟೇಟಮೆಂಟುಗಳನ್ನು ನ್ಯಾಯಾಲಯಕ್ಕೆ ನೀಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

4. ನ್ಯಾಯಾಲಯದಲ್ಲಿ ನಮ್ಮ ಬಾಬ್ತು ಒಂದು ಪ್ರಕರಣ ಇದ್ದು, ಸದರಿ ಪ್ರಕರಣದಲ್ಲಿ ರಾಜಿಯಾಗಿ ನನಗೆ ರೂ 15 ಲಕ್ಷ ಹಣ ಬಂದಿತ್ತು, ಆ ಹಣದಲ್ಲಿ ಆರೋಪಿಗೆ ಸಾಲವಾಗಿ 6. ಲಕ್ಷ ನೀಡಿರುತ್ತೇನೆ. ನಮ್ಮ ಮನೆಯ ಕ್ರಯದ ಕರಾರಿಗೆ ಸಂಬಂದಪಟ್ಟಂತೆ ದಾವೆ ಹಾಕಿರುತ್ತೇನೆ, ಸದರಿ ದಾವೆಯನ್ನು ನನಗೆ 15 ಲಕ್ಷ ಬಂದಿರುತ್ತದೆ. ಸದರಿ ದಾವೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕರಾರು ಪತ್ರವನ್ನು ಸದರಿ ದಾವೆಯಲ್ಲಿ ಚಲುವೇಗೌಡ ಎಂಬುವವರ ಅವರ ಮನೆಯನ್ನು ನಮ್ಮ ಹೆಸರಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ.

ಮುಂದುವರಿದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಗಿದೆ

ಸಾ. ಓ. ಹೇ. ಸ. ಒ

2 ನೇ ಅಪರ ಸಿವಿಲ್ ಜೆಡ್ಜ್ ಮತ್ತು ಜೆ ಎಂ ಎಫ್ ಸಿ,
ಪಾಂಡವಪುರ